ನಿಮಗಿಂತ ಹಿಂದಿನ (ಸಮುದಾಯದಲ್ಲಿ) ಒಬ್ಬ ವ್ಯಕ್ತಿಯಿದ್ದನು. ಅವನಿಗೆ ಗಾಯವಾಗಿತ್ತು. ಅವನು ತಾಳ್ಮೆ ಕಳೆದುಕೊಂಡು ಚಾಕುವಿನಿಂದ ತನ್ನ ಕೈಯನ್ನು ಕತ್ತರಿಸಿಕೊಂಡನು. ರಕ್ತ ಹರಿಯುವುದು ನಿಲ್ಲದೆ ನಂತರ ಅವನು ಸತ್ತನು. ಅಲ್ಲಾಹು ಹೇಳಿದನು: 'ನನ್ನ ದಾಸನು ತನ್ನ ಪ್ರಾಣದೊಂದಿಗೆ ಆತುರಪಟ್ಟಿದ್ದಾನೆ. ನಾನು ಅವನಿಗೆ ಸ್ವರ್ಗವನ್ನು ನಿಷಿದ್ಧಗೊಳಿಸಿದ್ದೇನೆ.'

ಹಸನ್ ರಿಂದ ವರದಿ. ಅವರು ಹೇಳಿದರು: ಜುಂದುಬ್ ಬಿನ್ ಅಬ್ದುಲ್ಲಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ಈ ಮಸೀದಿಯಲ್ಲಿ ನಮಗೆ ಒಂದು ಹದೀಸ್ ತಿಳಿಸಿದರು - ಅವರು ನಮಗೆ ತಿಳಿಸಿದಾಗಿನಿಂದ ನಾವು ಆ ಹದೀಸನ್ನು ಮರೆತಿಲ್ಲ ಮತ್ತು ಜುಂದುಬ್ ಅಲ್ಲಾಹುವಿನ ಸಂದೇಶವಾಹಕರ (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಮೇಲೆ ಸುಳ್ಳು ಹೇಳಿರಬಹುದೆಂದು ನಾವು ಭಯಪಡುವುದಿಲ್ಲ - ಅವರು ಹೇಳಿದರು: ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿಮಗಿಂತ ಹಿಂದಿನ (ಸಮುದಾಯದಲ್ಲಿ) ಒಬ್ಬ ವ್ಯಕ್ತಿಯಿದ್ದನು. ಅವನಿಗೆ ಗಾಯವಾಗಿತ್ತು. ಅವನು ತಾಳ್ಮೆ ಕಳೆದುಕೊಂಡು ಚಾಕುವಿನಿಂದ ತನ್ನ ಕೈಯನ್ನು ಕತ್ತರಿಸಿಕೊಂಡನು. ರಕ್ತ ಹರಿಯುವುದು ನಿಲ್ಲದೆ ನಂತರ ಅವನು ಸತ್ತನು. ಅಲ್ಲಾಹು ಹೇಳಿದನು:
'ನನ್ನ ದಾಸನು ತನ್ನ ಪ್ರಾಣದೊಂದಿಗೆ ಆತುರಪಟ್ಟಿದ್ದಾನೆ. ನಾನು ಅವನಿಗೆ ಸ್ವರ್ಗವನ್ನು ನಿಷಿದ್ಧಗೊಳಿಸಿದ್ದೇನೆ.'" [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ನಮ್ಮ ಹಿಂದಿನ ಸಮುದಾಯದಲ್ಲಿ ಒಬ್ಬ ವ್ಯಕ್ತಿಯಿದ್ದನು. ಅವನಿಗೆ ಗಾಯವಾಗಿತ್ತು. ಅವನು ತಾಳ್ಮೆ ಕಳೆದುಕೊಂಡು ನೋವನ್ನು ಸಹಿಸಲಾಗದೆ ಬೇಗನೆ ಸಾಯಲು ಚಾಕುವಿನಿಂದ ತನ್ನ ಕೈಯನ್ನು ಕತ್ತರಿಸಿಕೊಂಡನು. ರಕ್ತ ಹರಿಯುವುದು ನಿಲ್ಲದೆ ಅವನು ಸತ್ತುಹೋದನು. ಅಲ್ಲಾಹು ಹೇಳಿದನು: "ನನ್ನ ದಾಸನು ತನ್ನ ಪ್ರಾಣದೊಂದಿಗೆ ಆತುರಪಟ್ಟಿದ್ದಾನೆ. ನಾನು ಅವನಿಗೆ ಸ್ವರ್ಗವನ್ನು ನಿಷಿದ್ಧಗೊಳಿಸಿದ್ದೇನೆ."

http://www.sunnah.global/hadeeth/kn/show/2981